‘ಅಲ್ಲ. ವೈನ್ ಅಭ್ಯಾಸ ಇಲ್ಲ.’

‘ಅಯ್ಯೋ. ಜಿನ್ ಕೂಡ ಇದೆ. ಆದರೆ ಸ್ವಲ್ಪವೇ ಇದೆ’ ಅಂದು ಕಪ್‌ಬೋರ್ಡ್ ತೆಗೆದು ಬಾಟಲ್ ತೋರಿಸಿದಳು.

‘ಸರಿಹೋಗುತ್ತಾ?’

‘ಸರಿಹೋಗುತ್ತೆ.’

ಕೆಲಸದ ಹುಡುಗಿ ದಿನಾ ಮಾಡುವ ಕೆಲಸದಂತೆ ಗ್ಲಾಸುಗಳು, ಕುಡಿಯುವ ನೀರು ಇಟ್ಟು ಬಾಗಿಲು ಅರ್ಧ ಮುಚ್ಚಿ ಹೊರಟುಹೋದಳು.

ಆಕೆ ಡ್ರಿಂಕ್ಸ್ ಕಲಸಿದ ಮೇಲೆ ಚಿಯರ್ಸ್ ಏನೂ ಹೇಳದೆ ಗುಟುಕೆತ್ತಿ, ‘ಇಷ್ಟೊತ್ತು ಏನಂದ್ರಿ ನೀವು ನಮ್ಮ ಹುಡುಗನ ಬಗ್ಗೆ? ಮೊದಲು ಅವನೊಳಗೆ ಏನಿದೆಯೋ ನೋಡಿಕೊಳ್ಳಿ ಅಂತ ತಾನೆ’ ಅಂದಳು.

ನಾನು ಗಾಬರಿಯಾದೆ.

‘ಟೆನ್ಸ್ ಆಗ್ಬೇಡಿ. ನಾನು ಮಾಮೂಲಾಗೇ ಕೇಳ್ತಿದೀನಿ. ತಗಾದೆ ತೆಗೆಯೋಕಲ್ಲ’ ಅಂದಳು ನಗುತ್ತ.

ಆನಂತರ ಗ್ಲಾಸನ್ನು ಗಲ್ಲಕ್ಕೆ ಆನಿಸಿಕೊಂಡು ಆಲೋಚಿಸುವವಳಂತೆ ಮುಖ ಮಾಡಿ, ‘ಅಷ್ಟೊಂದು ಟೈಮ್ ಎಲ್ಲಿದೇರಿ. ನಮ್ಮ ಹುಡುಗನೊಳಗೆ ಏನಿದೆಯೋ ಅಂತ ನೋಡುವಷ್ಟು ಟೈಮು ಎಲ್ಲಿದೆ. ಬದುಕೆಲ್ಲ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಒಂದು ಅಸಂತೃಪ್ತಿಯಿಂದ ಮತ್ತೊಂದು ಅಸಂತೃಪ್ತಿಗೆ ಓಡುವುದರಲ್ಲೇ ಸರಿಹೋಯ್ತೇ’ ಅಂದಳು ಆಳವಾಗಿ.

ಆಕೆಯನ್ನು ನೋಡಿದರೆ ಹೇಳಬೇಕಾದ ಕತೆಯನ್ನು ಹುಡುಕುತ್ತಿರುವವಳಂತೆ ಕಂಡಳು.

ನಾನು ಗ್ಲಾಸ್ ಎತ್ತಿಕೊಂಡೆ.

ಆಕೆ ಕತೆಯೊಳಗೆ ಇಳಿದಳು.

ಈ ಸಲ ಅವರ ಅಪ್ಪನ ಹತ್ತಿರಕ್ಕಲ್ಲ. ಕಾಲೇಜ್ ಹತ್ತಿರಕ್ಕೆ.

‘ಏಯ್ಟೀಏಯ್ಟ್‌ನಲ್ಲಿ ಉಸ್ಮಾನಿಯಾ ಯೂನಿವರ್ಸಿಟಿಯಲ್ಲಿ ನನ್ನ ಎಂಬಿಬಿಎಸ್ ಮುಗಿಯಿತು. ಆದರೆ ಆ ಕಾಲ ಒಂದು ವಿಚಿತ್ರ ಕಾಲ. ಮೆಡಿಕಲ್ ಫೀಲ್ಡ್‌ನಲ್ಲಿ ಹಲವು ಬದಲಾವಣೆಗಳಾಗುತ್ತಿದ್ದ ಕಾಲ. ಅಸಂತೃಪ್ತಿಗಳು ಉಕ್ಕುತ್ತಿದ್ದ ಕಾಲ ಕೂಡ.

ಅವತ್ತಿಗೇ ನಮ್ಮ ಪ್ರೊಫೆಸರ್‌ಗಳು ತಮ್ಮ ಫ್ರಸ್ಟ್ರೇಶನ್ ಅನ್ನೋ ಅಥವಾ ಜೀವನಾನುಭವವನ್ನೋ ನಮ್ಮೊಳಗೆ ಇಂಜೆಕ್ಟ್ ಮಾಡಲು ಪ್ರಾರಂಭಿಸಿದ್ದರು. ಮೆಡಿಕಲ್ ಪ್ರೊಫೆಷನ್ ಇನ್ನು ಎಳ್ಳಷ್ಟೂ ನೋಬಲ್ ಪ್ರೊಫೆಷನ್ ಆಗಿ ಉಳಿದಿಲ್ಲವೆಂದೂ ಅಂಥ ಮಿತ್ ಏನಾದ್ರೂ ತಲೆಗೇರಿಸಿಕೊಂಡಿದ್ದರೆ ಕೂಡಲೇ ತೊಲಗಿಸಬೇಕೆಂದೂ ಇಲ್ಲದಿದ್ದರೆ ಆ ಭಾರದ ಕೆಳಗೆ ಸಿಲುಕಿ ಸಾಯ್ತೀರೆಂದೂ ಅವರು ಡೈರೆಕ್ಟಾಗಿ ಕ್ಲಾಸ್‌ರೂಮುಗಳಲ್ಲೇ ನಮಗೆ ಬೋಧಿಸಲು ಪ್ರಾರಂಭಿಸಿದ್ದರು.

ಆದರೆ ಅವರು ಬೋಧಿಸದೆ ಇದ್ದರೆ ತಿಳಿದುಕೊಳ್ಳದಂಥ ಸ್ಥಿತಿಯಲ್ಲೇನೂ ಇರಲಿಲ್ಲ ಮೆಡಿಕೊಗಳು. ಅವತ್ತಿಗೇ ತಲೆಮಾರು ಬದಲಾಗಿತ್ತು. ರೋಗಗಳು, ಸೇವೆ, ಶುಶ್ರೂಷೆ, ಪವಿತ್ರವಾದ ವೃತ್ತಿ ಅನ್ನುವ ಮಾತುಗಳೆಲ್ಲ ಹಳಸಿ ಹೋಗಿ ಕರಿಯರ್ ಓರಿಯೆಂಟೇಶನ್ ಬೆಳೆದುಬಿಟ್ಟಿತ್ತು. ಮೆಡಿಕಲ್ ಮಾಡಿದರೆ ದುಡ್ಡು ಸಾಕಷ್ಟು ಸಂಪಾದಿಸಬಹುದೆಂದು, ವರದಕ್ಷಿಣೆ ಗಿರದಕ್ಷಿಣೆ ಕೈತುಂಬಾ ಸಿಗುತ್ತದೆಂದು, ಕರಿಯರ್ ಚೆನ್ನಾಗಿರುತ್ತದೆಂದು ಆಶೆಪಡುವವರೇ